

# ಚೌಕಟ್ಟುಗಳಿಲ್ಲದ ಅನನ್ಯ

ಬೀದಿ ಪಾಲಾದವರು, ವಲಸೆ ಬಂದವರು, ನಾನಾ ಕಾರಣಗಳಿಂದ ಶಾಲೆಯಿಂದ ಹೊರಗುಳಿದವರು – ‘ಅನನ್ಯ ಫೌಂಡೇಷನ್’ ಶಾಲೆಯ ಯಾವ ವಿದ್ಯಾರ್ಥಿಯನ್ನು ಮಾತನಾಡಿಸಿದರೂ ಒಂದು ವಿಭಿನ್ನ ಕಥನ ಎದುರಾಗುತ್ತದೆ. ಈ ಶಾಲೆ ನಮ್ಮ ಸಾಂಪ್ರದಾಯಿಕ ಶಿಕ್ಷಣದ ಪರಿಕಲ್ಪನೆಯನ್ನೇ ಪ್ರಶ್ನಿಸುವಂತಿದ್ದು, ಬದುಕನ್ನೇ ಪಠ್ಯವನ್ನಾಗಿ ರೂಪಿಸಿಕೊಂಡಿದೆ.

■ ಕಾವ್ಯ ಸಮತಳ

‘ಶಿಕ್ಷಣ ಅಂದ್ರೆ ಓದುವುದು ಮಾತ್ರವಲ್ಲ – ಸ್ವಚ್ಛತೆ, ಅಡುಗೆ, ಆಟ ಎಲ್ಲವೂ ಅದರಲ್ಲಿರುತ್ತದೆ. ಹೋಂವರ್ಕ್ ಮಾಡಿಲ್ಲವೆಂದು ಟೀಚರ್ ಹೊಡೀತಾರೆ ಅನ್ನುವ ಹೆದರಿಕೆ ನಮಗಿಲ್ಲ. ಮಣಭಾರದ ಪುಸ್ತಕ ಹೊರುವ ಯೋಚನೆಯಿಲ್ಲ. ರ್‍ಯಾಂಕ್ ಬರಬೇಕು ಅಂತ ಅಮ್ಮ–ಅಪ್ಪ ಪೀಡಿಸಲ್ಲ, ಪರೀಕ್ಷೆ ಎಂಬ ಪೆಡಂಭೂತದ ಭಯವಂತೂ ಮೊದಲೇ ಇಲ್ಲ. ಬೆಳಿಗ್ಗೆಯಿಂದ ಸಂಜೆವರೆಗೂ ಆಡುತ್ತಾ ಕುಣಿಯುತ್ತಾ ಕಲಿಯುತ್ತೀವಿ’ – ಇದು ‘ಅನನ್ಯ ಫೌಂಡೇಷನ್’ ಶಾಲೆಯ ಮಕ್ಕಳ ಸಂಭ್ರಮ.

ಚಿಂದಿ ಆಯುತ್ತಿದ್ದ ಮಕ್ಕಳು, ಶಾಲೆಯ ಮುಖ ನೋಡದವರು, ಪರೀಕ್ಷೆ ಭಯ, ಶಿಕ್ಷಕರ ಹೆದರಿಕೆ, ಕಲಿಯಲು ಆಗುತ್ತಿಲ್ಲ ಎನ್ನುವ ದುಗುಡದಿಂದ ಶಾಲೆ ಬಿಟ್ಟ ಮಕ್ಕಳು, ರಾಜ್ಯದ ಬೇರೆ ಬೇರೆ ಮೂಲೆಗಳಿಂದ ಗುಳೆಬಂದು ಶಾಲೆಗೆ ಹೋಗಲಾರದೆ ಅಪ್ಪ ಅಮ್ಮಂದಿರ ಜೊತೆಯಲ್ಲೆ ಕೆಲಸ ಮಾಡುತ್ತಿದ್ದವರು – ಹೀಗೆ ನಾನಾ ಕಾರಣಗಳಿಂದ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ‘ಬದುಕಿನ ಶಿಕ್ಷಣ’ ಕಲಿಸುತ್ತಿರುವ ಶಾಲೆ ಈ ‘ಅನನ್ಯ ಫೌಂಡೇಷನ್’. ಬೆಂಗಳೂರಿನಿಂದ ಅನತಿ ದೂರದಲ್ಲಿರುವ ಸರ್ಜಾಪುರ ಮುಖ್ಯರಸ್ತೆಯ ಕಾರ್ಲೆರಾಮ್ ನಗರದಲ್ಲಿ ಹಸಿರಿನಿಂದ ಕಂಗೊಳಿಸುವ ಪರಿಸರದಲ್ಲಿದೆ ಈ ಶಾಲೆ.

ಶಿಕ್ಷಣದಿಂದ ವಂಚಿತಗೊಂಡ ಮಕ್ಕಳಿಗೆ ಶಿಕ್ಷಣ ಕಲಿಸುತ್ತಿದೆ. ಮಕ್ಕಳ ಕನಸುಗಳಿಗೆ ಬೆಂಗಾವಲಾಗಿದ್ದು, ಅವುಗಳನ್ನು ಈಡೇರಿಸಲು 20 ವರ್ಷಗಳಿಂದ ಎಲೆಮರೆಕಾಯಿಯಂತೆ ಶ್ರಮಿಸುತ್ತಿದೆ ಈ ಶಾಲೆಯ ಆಡಳಿತ ವರ್ಗ.

## ‘ಅನನ್ಯ’ ಆರಂಭವಾದದ್ದು ಹೇಗೆ?

1998ರ ಸಮಯ. ಚಿಂದಿ ಆಯುತ್ತಾ, ಸಿಕ್ಕ ಜಾಗದಲ್ಲಿ ಮಲಗುತ್ತಾ ಬದುಕಿದ್ದ ಮಕ್ಕಳಿಗಾಗಿ ಆರಂಭವಾದ ಶಾಲೆ ಇದು.